ದಿನಾಂಕ 14 ನೇ ಅಕ್ಟೋಬರ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ - ವಾದಿ ಪರ ಶ್ರೀ ಕೆ ಪಿ ಬಿ ವಕೀಲರಿಂದ :-

ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಇಂಗ್ಲಿಷ್ ಓದಲು ಬರೆಯಲು ಬರುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿದಾಗ ಅದು ಕರಾರು ಕಾಪಿ ಎನ್ನುತ್ತಾರೆ.. ಪ್ರತಿವಾದಿಯರ ವಕೀಲರು ಹೇಳಿದ ಕಾರಣ ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ.ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಕೀಲರೇ ತಯಾರಿಸಿದ್ದಾರೆ ಎಂದರೆ ಸರಿ. ವಾದಿ ನನಗೆ ಗೊತ್ತು. ನಾನು ಮತ್ತು ವಾದಿ ಸಮಾರಂಭಗಳು ಇದ್ದಾಗ ಸೇರುತ್ತೇವೆ ಆದರೆ ಮಾತನಾಡುವುದಿಲ್ಲ ಎನ್ನುತ್ತಾರೆ. ನಾನು ವಾದಿಯ ಮದುವೆಗೆ ಹೋಗಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರಿಯರ ಮದುವೆಗೆ ವಾದಿ ಬಂದಿಲ್ಲ ಎಂದರೆ ಸರಿ. ನಾನು ಮತ್ತು ವಾದಿ ಒಂದೇ ಕುಟುಂಬದವರು ಎಂದರೆ ಸರಿ. ಪ್ರತಿವಾದಿ 1 ನನಗೆ ಪರಿಚಯ ಎಂದರೆ ಸರಿ. ನನ್ನ ಪತ್ನಿ ಮನೆ ಹಾಗೂ ಪ್ರತಿವಾದಿ 1 ರವರ ಮನೆ ಪೊನ್ನಂಪೇಟೆಯಲ್ಲಿ ಒಂದೇ ಕಡೆ ಇದೆ ಎಂದರೆ ಸರಿ. ನಾನು ಅಲ್ಲಿಗೆ ಹೋದಾಗ ಪ್ರತಿವಾದಿ 1 ರವರ ಜೊತೆಗೆ ಅನ್ಯೋನ್ಯವಾಗಿ ಇರುತ್ತೇನೆ ಎಂದರೆ ಸರಿ.

ಈ ದಾವೆಯನ್ನು ವಾದಿ ಏಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ. 98 ಆಸ್ತಿಗೆ ದಾವೆ ಸಲ್ಲಿಸಿದ್ದಾರೆ ಎಂಬುದು ನನಗೆ ತಿಳಿದಿದೆ ಬೇರೆ ವಿಚಾರ ತಿಳಿದಿರುವುದಿಲ್ಲ. ನಾನು 1967 ರಲ್ಲಿ ಜನಿಸಿರುತ್ತೇನೆ. ನಾನು ನನಗೆ 16 ವರ್ಷ ಆಗುವ ತನಕ ಶಾಲೆಗೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಶಾಲೆಗೆ ಹೋಗುವ ದಿನಗಳಲ್ಲಿ ನಮ್ಮ ತಂದೆ ತಮ್ಮ ವ್ಯವಹಾರಗಳಿಗೆ ನನ್ನನ್ನು ಸೇರಿಸಿಕೊಳ್ಳುತ್ತಿರಲ್ಲಿ ಎಂದರೆ ಸರಿಯಲ್ಲ, ಶಾಲೆಗೆ ರಜೆ ಇದ್ದಾಗ ನಮ್ಮ ತಂದೆ ನಮ್ಮನ್ನು ಕಛೇರಿಗೆ ಕರೆದುಕೊಂಡು ಹೋಗುತ್ತಿದ್ದರು. ಈ ವ್ಯವಹಾರದ ಬಗ್ಗೆ ನನ್ನ ತಂದೆ ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಆದರೆ ನನ್ನ ತಂದೆ 30 ಸೆಂಟ್ ಜಾಗವನ್ನು ಸರ್ವೆ ನಂ. 98 ರಲ್ಲಿ ಪ್ರತಿವಾದಿ 1 ರವರ ತಂದೆಗೆ ಮಾರಾಟ ಮಾಡಿದ್ದೇನೆ ಎಂದು ತಿಳಿಸಿರುತ್ತಾರೆ. 1983 ರಲ್ಲಿ ನನ್ನ ತಂದೆ ಮನೆಯಲ್ಲಿ ಮಾರಾಟದ ವಿಚಾರ ತಿಳಿಸಿದರು. ಹಣದ ತಾಪತ್ರಯ ಇದ್ದ ಕಾರಣ ಮನೆಯನ್ನು ಮಾರಾಟ ಮಾಡಿದ ವಿಚಾರವನ್ನು ನನ್ನ ತಂದೆ ನನಗೆ ತಿಳಿಸಿರತ್ತಾರೆ. ಹಣಕಾಸು ವಿಚಾರವನ್ನು ನನ್ನ ತಂದೆ ನನ್ನ ತಾಯಿಗೆ ನನ್ನ ಮುಂದೆ ಹೇಳುತ್ತಿದ್ದರು ಎನ್ನುತ್ತಾರೆ. ಆಗ ನಾನು ಸದರಿ ವಿಚಾರವನ್ನು ಕೇಳಿಸಿಕೊಂಡಿದ್ದೇನೆ ಎನ್ನುತ್ತಾರೆ.

ಮಾಚಮಾಡ ಕುಟುಂಬದ ಜಾಗದಲ್ಲಿ ವಾದಿಗೆ ಹಕ್ಕು ಇದೆ ಎಂದರೆ ಸರಿ. ವಾದಿ ಕುಟುಂಬದ ಸ್ವತ್ತನ್ನು ಸ್ವಾಧೀನಪಡಿಸಿಕೊಂಡು ಕಾಫಿ ಬೆಳೆಯುತ್ತಿದ್ದಾರೆ ಎಂದರೆ ಸರಿ. ಕುಟುಂಬದ ಜಮೀನು ಬಲ್ಯಮಂಡೂರಿನಲ್ಲಿದೆ ಎಂದರೆ ಸರಿ. ಬಲ್ಯಮಂಡೂರಿನಲ್ಲಿ ಸರ್ವೆ ನಂ. 98/2 ರಲ್ಲಿ 2 ಎಕರೆ 60 ಸೆಂಟ್ ಜಮೀನು ಇದೆ ಎಂದರೆ ಸರಿ. ಪ್ರತಿವಾದಿ 1 ರವರ ತಂದೆಗೆ ನೀಡಿರುವ 30 ಸೆಂಟ್ ಜಾಗ ಹೊರತುಪಡಿಸಿ ಉಳಿದ ಜಾಗದಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ. ಪ್ರತಿವಾದಿ 1 ರವರಿಗೆ ಸಹಾಯ ಮಾಡಲು ನಾನು ಜಮೀನು ಮಾರಾಟ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವತ್ತೂ ಜಮೀನನ್ನು ಪ್ರತಿವಾದಿ 1 ರವರ ತಂದೆಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಬಲ್ಯಮಂಡೂರಿನಲ್ಲಿ ಸರ್ವೆ ನಂ. 98/2 ರಲ್ಲಿ 2 ಎಕರೆ 60 ಸೆಂಟ್ ಜಮೀನು ಪೂರ್ತಿ ಭಾಗದಲ್ಲಿ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೂ ಕಾಫಿ ತೋಟ ಇದೆ. ನಾನು ಸಿ ಆರ್ ಸಿ ಮಾಡಿಸಿದ್ದೇನೆ. ಸಾಮಾನ್ಯವಾಗಿ ಕಾಫಿ ಬೋರ್ಡ್ ನವರು ಸ್ಥಳಕ್ಕೆ ಬಂದು ಪರಿಶೀಲಿಸಿ, ಸರ್ವೆ ಮಾಡಿ ಆನಂತರ ಸಿ ಆರ್ ಸಿ ನೀಡುತ್ತಾರೆ ಎಂದರೆ ಸರಿ. ನಿಪಿ 2 ವಾದಿಗೆ ನೀಡಿದ ಸಿ ಆರ್ ಸಿ ಎಂದರೆ ಸರಿ. ನಿಪಿ 2 ರಂತೆ ವಾದಿಗೆ ಸರ್ವೆ ನಂ. 98/2 ರಲ್ಲಿ 2 ಎಕರೆ 60 ಸೆಂಟ್ ಜಮೀನಿಗೆ ಸಿ ಆರ್ ಸಿ ಆಗಿದೆ ಎಂದರೆ ಸರಿ. ಸರ್ವೆ ನಂ. 98/2 ರ ಪಹಣಿ ನಾನು ನೋಡಿದ್ದೇನೆ. ನಿಪಿ 1 ರಲ್ಲಿ ವಾದಿಯ ಹೆಸರಿನಲ್ಲಿ 2 ಎಕರೆ 60 ಸೆಂಟ್ ಜಮೀನು ಇದೆ ಎಂದರೆ ಸರಿ. ನಿಪಿ 1 ರಲ್ಲಿ ವಾದಿ ಸದರಿ ಸ್ವತ್ತಿನ ಮೇಲೆ ಸಾಲ ಮಾಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿ.

ವಾದಿಯು ಸರ್ವೆ ನಂ. 98/2 ರಲ್ಲಿ ಹದ್ದುಬಸ್ತು ಸರ್ವೆ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರ ತಿಳಿದಿಲ್ಲದೇ ಇದ್ದರೂ ಸಹ ಪ್ರತಿವಾದಿ 1 ರವರು ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ.